## ಮಾನ್ಯ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಕೆ. ಪ್ರತಾಪಸಿಂಹ ನಾಯಕ್ ರವರು ನಿಯಮ 330ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಬಗ್ಗೆ.

(5)

**ವಿಷಯ:-** ರಾಜ್ಯದಲ್ಲಿ ಎಲೆಚುಕ್ಕೆ ರೋಗದ ಉಲ್ಬಣ, ಅಕಾಲಿಕ ಮಳೆಯ ಕಾರಣದಿಂದ ಫಸಲು ನಷ್ಟದ ಜೊತೆಗೆ ಗುಣಮಟ್ಟ ಕುಸಿತ, ಬೆಳೆ ನಷ್ಟ ಹಾಗೂ ಬೆಲೆ ಕುಸಿತದಿಂದಾಗಿ ಅಡಿಕೆ ಬೆಳಗಾರರು ಇಂದೆಂದೂ ಕಾಣದ ದಾರುಣ ಪರಿಸ್ಥಿತಿಗೆ ಒಳಗಾಗಿದ್ದಾರೆ. ಅಡಿಕೆ ಉತ್ಪನ್ನಗಳ ವ್ಯಾಪಕ ಸಂಶೋಧನೆ ಹಾಗೂ ಅಡಿಕೆ ಉತ್ಪನ್ನಗಳ ಮೌಲ್ಯವರ್ಧನೆಗೆ ಒತ್ತು ನೀಡಿ ಆ ಮೂಲಕ ಅಡಿಕೆ ಉತ್ಪನ್ನಗಳನ್ನು ಹಲವಾರು ಔಷದಿಗಳ ತಯಾರಿಕೆಯಲ್ಲಿ ಬಳಸುವುದು ಹಾಗೂ ಸಾಬೂನು, ಬಣ್ಣ, ಸಿರಪ್, ವೈನ್, ಸೊಳ್ಳೆಬತ್ತಿ ಹಾಗೂ ಹಲವಾರು ವಿವಿಧ ಬಗೆಯ ಉತ್ಪನ್ನಗಳ ತಯಾರಿಕೆಯಲ್ಲಿ ವ್ಯಾಪಕವಾಗಿ ಬಳಸಿಕೊಳ್ಳುವ ಸಾಧ್ಯತೆಗಳ ಕುರಿತು ಇದುವರೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳದೇ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು.

**ಉತ್ತರ:-** ರಾಜ್ಯದಲ್ಲಿ ಅಡಿಕೆ ಬೆಳೆಯನ್ನು 6.11 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು, ವಾರ್ಷಿಕ ಉತ್ಪಾದನೆಯು 8.40ಲಕ್ಷಗಳ ಮೆ.ಟನ್ ಗಳೆಂದು ಅಂದಾಜಿಸಲಾಗಿದೆ. ಈ ಬೆಳೆಯನ್ನು ಹೆಚ್ಚಾಗಿ ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉತ್ತರ ಕನ್ನಡ , ಕೊಡಗು, ಉಡುಪಿ, ಚಿತ್ರದುರ್ಗ, ದಾವಣಗೆರೆ, ತುಮಕೂರು ಹಾಗೂ ಹಾಸನ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದೆ.

ಅಡಿಕೆ ಬೆಳೆಗೆ ಎಲೆಚುಕ್ಕೆ ರೋಗವು ಶೀಘ್ರವಾಗಿ ಹರಡುತ್ತಿದ್ದು, ಚಿಕ್ಕಮಗಳೂರು (20,000 ಹೆ.) ಶಿವಮೊಗ್ಗ (12,500 ಹೆ), ಉತ್ತರ ಕನ್ನಡ (4044 ಹೆ.), ಹಾಸನ (4200ಹೆ.) ದಕ್ಷಿಣ ಕನ್ನಡ (1100ಹೆ.), ಉಡುಪಿ (160ಹೆ.) ಹಾಗೂ ಕೊಡಗು (500ಹೆ.) ಪ್ರದೇಶದಲ್ಲಿ ಒಟ್ಟಾರೆ 42504 ಹೆಕ್ಟರ್ ಪ್ರದೇಶವು ಭಾದಿತವಾಗಿರುತ್ತದೆ. ಇದರಿಂದ ಅಡಿಕೆ ಬೆಳೆಗಾರರು ಸಂಕಷ್ಟದ ಪರಿಸ್ಥಿತಿಗೆ ಸಿಲುಕಿದ್ದಾರೆ. ಈ ರೋಗ ನಿಯಂತ್ರಣಕ್ಕೆ ಕೆಳಕಾಣಿಸಿದ ಕ್ರಮಗಳನ್ನು ಕೈಗೊಳ್ಳಲಾಗಿದೆ.

1) ಅಡಿಕೆ ಎಲೆಚುಕ್ಕೆ ರೋಗ ಭಾದಿತ ರೈತರಿಗೆ ಸಸ್ಯ ಸಂರಕ್ಷಣೆ ಔಷಧಿಗಳನ್ನು ಖರೀದಿಸಲು ಪ್ರತಿ ಹೆಕ್ಟೇರ್‌ಗೆ ರೂ.4000.00ಗಳಂತೆ ಸಹಾಯ ಧನವನ್ನು ವಿತರಿಸಲಾಗಿದೆ. ಈ ಸಂಬಂಧ ಈವರೆಗೆ 17264 ರೈತರಿಗೆ ರೂ. 200.00ಲಕ್ಷಗಳನ್ನು ವಿತರಿಸಲಾಗಿದೆ.
2) ರೋಗದ ನಿಯಂತ್ರಣಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ರೈತರಿಗೆ ತರಬೇತಿ ಹಾಗೂ ಕಾರ್ಯಾಗಾರಗಳ ಮೂಲಕ ವಿವರಗಳನ್ನು ನೀಡಲಾಗಿದೆ. ವಿವಿಧ ಜಿಲ್ಲೆಗಳಲ್ಲಿ ಒಟ್ಟು 138 ತರಬೇತಿ ಮತ್ತು ಕಾರ್ಯಾಗಾರಗಳ ಮೂಲಕ ತಾಂತ್ರಿಕ ಮಾಹಿತಿ ಒದಗಿಸಲಾಗಿದೆ.
3) ಅಡಿಕೆ ಎಲೆಚುಕ್ಕೆ ರೋಗ ಮತ್ತು ಅಡಿಕೆ ಬೆಳೆಗೆ ತಗಲುವ ಹಳದಿ ಎಲೆ ರೋಗ ಇನ್ನಿತರೆ ಸಮಸ್ಯೆಗಳಿಗೆ ಶಾಶ್ವತ ಪರಿಹಾರವನ್ನು ಕೈಗೊಳ್ಳಲು ಶೃಂಗೇರಿಯಲ್ಲಿ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಅಡಿಕೆ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲಾಗಿದ್ದು, ಸಂಶೋಧನೆ ಪ್ರಗತಿಯಲ್ಲಿದೆ.
4) ಅಡಿಕೆ ಬೆಳೆಯ ಸಮಸ್ಯೆಗಳ ಸಮಗ್ರ ಪರಿಶೀಲನೆ ಮಾಡಿ ರೋಗ, ಕೀಟ, ಮಾರುಕಟ್ಟೆ ದರಗಳ ಏರಿಳಿತ ಇತ್ಯಾದಿಗಳನ್ನು ಪರಿಗಣಿಸಿ ಪರ್ಯಾಯ ಬೆಳೆಗಳನ್ನು ಬೆಳೆಸಲು ರೈತರಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಬಾಧಿತ ಅಡಿಕೆ ತೋಟಗಳಲ್ಲಿ ಪುನಶ್ಚೇತನ ಕಾರ್ಯಗಳನ್ನು ಕೈಗೊಳ್ಳಲು ಇತರೆ ವಾಣಿಜ್ಯ ಬೆಳೆಗಳಾದ ಕೋಕೋ, ಕಾಳಮೆಣಸು, ತಾಳೆ ಬೆಳೆ, ಕಾಫಿ, ಬಾಳೆ, ತೆಂಗು, ಜಾಯಿಕಾಯಿ, ಬೆಣ್ಣೆಹಣ್ಣು ಇತ್ಯಾದಿ ಬೆಳೆಗಳನ್ನು ಬೆಳೆಯಲು ಪ್ರತಿ ಹೆಕ್ಟೇರ್‌ಗೆ ರೂ.15,000/-ಗಳಂತೆ 2 ಹೆಕ್ಟೇರ್‌ಗಳವರೆಗೆ ಸಹಾಯಧನ ನೀಡಲಾಗುತ್ತಿದೆ. ಈವರೆಗೆ 2491 ಹೆಕ್ಟೇರ್ ವಿಸ್ತೀರ್ಣದಲ್ಲಿ ಪುನಶ್ಚೇತನ ಕೈಗೊಳ್ಳಲು ರೂ.374.00ಲಕ್ಷಗಳ ಸಹಾಯಧನ ಒದಗಿಸಲಾಗಿರುತ್ತದೆ.
5) ಅಡಿಕೆ ಎಲೆಚುಕ್ಕೆ ರೋಗದ ನಿಯಂತ್ರಣದ ಕುರಿತು ಕೈಪಿಡಿ, ಕರಪತ್ರಗಳು ಮತ್ತಿತರೆ ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ ಕೈಗೊಳ್ಳಲಾಗುತ್ತಿದೆ.

2...

6) ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿ (RWBCIS) ಅಡಿಕೆ ಬೆಳೆಯನ್ನು ಸಹ ಅಳವಡಿಸಲಾಗಿದ್ದು, ವಿವಿಧ ಹವಾಮಾನ ಅಂಶಗಳಾದ ಮಳೆ, ತಾಪಮಾನ, ಸಾಪೇಕ್ಷ ಆರ್ದ್ರತೆ ಇತ್ಯಾದಿ ಅಂಶಗಳನ್ನು ಪರಿಗಣಿಸಿ ಇವುಗಳ ಸಂಯೋಜನೆಯಿಂದ ಬೆಳೆಯ ಬೆಳವಣಿಗೆ, ಉತ್ಪಾದನೆ ಮತ್ತು ಇಳುವರಿಯ ಮೇಲೆ ಉಂಟಾಗಬಹುದಾದ ಪರಿಣಾಮಗಳನ್ನು ವೈಜ್ಞಾನಿಕ ರೀತಿಯಲ್ಲಿ ವಿಶ್ಲೇಷಿಸಿ ಇದರಲ್ಲಿ ರೋಗ ಮತ್ತು ಕೀಟಗಳಿಗೆ ಪೂರಕವಾದ ಅಂಶಗಳನ್ನು ಸಹ ಅಳವಡಿಸಿ ಅಡಿಕೆ ಬೆಳೆಯನ್ನು ವಿಮಾ ವ್ಯಾಪ್ತಿಗೆ ಒಳಪಡಿಸಲಾಗಿದೆ.

7) ಇದಲ್ಲದೇ ಅಡಿಕೆ ಉತ್ಪನ್ನವು ಆರೋಗ್ಯಕ್ಕೆ ಪೂರಕವೆಂಬುದನ್ನು ಸಾಬೀತುಪಡಿಸಲು ಸಂಶೋಧನಾ ಸಮರ್ಥನೆಗಾಗಿ ಶ್ರೀ ಎಂ.ಎಸ್.ರಾಮಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ಪ್ರಯೋಗಗಳು ಚಾಲನೆಯಲ್ಲಿದ್ದು, ಅಂತಿಮ ಹಂತದಲ್ಲಿರುತ್ತದೆ.

8) ಎಲೆಚುಕ್ಕೆ ರೋಗದ ಸಮಸ್ಯೆ ಸೇರಿದಂತೆ ಅಡಿಕೆ ಬೆಳೆಯ ಸಮಸ್ಯೆಗಳ ಬಗ್ಗೆ ಶಾಶ್ವತ ಪರಿಹಾರ ಕೈಗೊಳ್ಳುವಲ್ಲಿ ಸಿ.ಪಿ.ಸಿ.ಆರ್.ಐ, ಕಾಸರಗೋಡು ಯು.ಎ.ಹೆಚ್.ಎಸ್. ಶಿವಮೊಗ್ಗಗಳಲ್ಲಿ ಸಂಶೋಧನೆ ಕೈಗೊಳ್ಳಲು ಹಾಗೂ ಸಸ್ಯ ಸಂರಕ್ಷಣೆ, ಸಮಗ್ರ ಪೋಷಕಾಂಶ ನಿರ್ವಹಣೆ, ಅರಿವು ಮೂಡಿಸುವ ಕಾರ್ಯಕ್ರಮಗಳು, ಅಡಿಕೆ ಕಟಾವಿಗಾಗಿ ಬಳಸುವ ದೋಟಿಗಳಿಗೆ ಸಹಾಯಧನ ನೀಡುವುದು ಇತ್ಯಾದಿಗಳಿಗಾಗಿ ರೂ.197 ಕೋಟಿಗಳ ಪ್ರಸ್ತಾವನೆಯು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿದೆ.

9) ಅಡಿಕೆ ಬೆಳೆ ಸೇರಿದಂತೆ ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ಹಾನಿ ಉಂಟಾದ ಸಂದರ್ಭದಲ್ಲಿ NDRF /SDRF ಮಾರ್ಗಸೂಚಿಗಳನ್ವಯ ಕಂದಾಯ ಇಲಾಖೆಯ ಮೂಲಕ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳಿಗೆ ಪ್ರತಿ ಹೆಕ್ಟೇರ್‌ಗೆ ರೂ.28,000/-ಗಳಂತೆ 2 ಹೆಕ್ಟೇರ್‌ಗಳಿಗೆ ಪರಿಹಾರ ನೀಡಲಾಗುತ್ತಿದೆ. ಅಡಿಕೆ ಬೆಳೆಯು 10750 ಹೆಕ್ಟೇರ್‌ಗಳಲ್ಲಿ ಹಾನಿಯಾಗಿರುವುದಾಗಿ ಅಂದಾಜಿಸಲಾಗಿದೆ.

10) ಕೇಂದ್ರ ಸರ್ಕಾರ ನೇಮಿಸಿರುವ ವೈಜ್ಞಾನಿಕ ತಂಡವು ದಿನಾಂಕ: 20 ರಿಂದ 22 ನವೆಂಬರ್-2022ರಲ್ಲಿ ಎಲೆಚುಕ್ಕೆ ರೋಗ ಬಾಧಿತವಾದ ಜಿಲ್ಲೆಗಳಾದ ಶಿವಮೊಗ್ಗ, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಗೆ ಭೇಟಿ ನೀಡಿರುತ್ತಾರೆ. ದಿನಾಂಕ: 04-01-2023 ರಂದು ಶೃಂಗೇರಿಯಲ್ಲಿ ಅಡಿಕೆ ಬೆಳೆ ಕುರಿತಾದ ಸಮಸ್ಯೆಗಳಿಗೆ ವೈಜ್ಞಾನಿಕ ಪರಿಹಾರವನ್ನು ಕಂಡುಕೊಳ್ಳಲು ಒಂದು ದಿನದ Brain Storming Session ಏರ್ಪಡಿಸಲಾಗಿದ್ದು ವಿಜ್ಞಾನಿಗಳು, ರೈತರು ಮತ್ತು ಅಧಿಕಾರಿಗಳು ಭಾಗವಹಿಸಿರುತ್ತಾರೆ. ಜನವರಿ- 2023ರ ಮಾಹೆಯಲ್ಲಿ ಕೇಂದ್ರ ಸರ್ಕಾರದ ವತಿಯಿಂದ ವಿಜ್ಞಾನಿಗಳ ತಂಡವು ರಾಜ್ಯದ ಅಡಿಕೆ ಎಲೆಚುಕ್ಕೆ ರೋಗ ಬಾಧಿತ ಪ್ರದೇಶಗಳಿಗೆ ಭೇಟಿ ನೀಡಿ ಪರಿಹಾರೋಪಾಯಗಳನ್ನು ಶಿಫಾರಸ್ಸು ಮಾಡಲಾಗಿದೆ.

11) ಅಡಿಕೆ ಪರ್ಯಾಯ ಉತ್ಪನ್ನಗಳನ್ನು ಉತ್ತೇಜಿಸಿ ಪ್ರಚಾರಪಡಿಸಲು ಖಾಸಗಿ ವಲಯ ಅಭಿವೃದ್ಧಿಪಡಿಸಿರುವ ಸಾಬೂನು, ಬಣ್ಣ, ಸಿರಪ್, ವೈನ್, ಸೊಳ್ಳೆಬತ್ತಿ ಇತ್ಯಾದಿಗಳನ್ನು ತೋಟಗಾರಿಕೆ ಇಲಾಖೆ ಮತ್ತು ಕೃಷಿ ವಿಶ್ವವಿದ್ಯಾಲಯಗಳ ವಿವಿಧ ಮೇಳಗಳಲ್ಲಿ ಪ್ರದರ್ಶನಕ್ಕೆ ಇಡಲಾಗುತ್ತಿದೆ. ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಗಳಿಂದ ಈ ಬಗ್ಗೆ ಹೆಚ್ಚಿನ ಸಂಶೋಧನೆಗೆ ಕ್ರಮಕೈಗೊಳ್ಳಲಾಗುವುದು.

ಹೀಗಾಗಿ ಎಲೆಚುಕ್ಕೆ ರೋಗ, ಅಕಾಲಿಕ ಮಳೆ, ಬೆಳೆ ನಷ್ಟ, ಬೆಲೆ ಕುಸಿತ ಸೇರಿದಂತೆ ಅಡಿಕೆ ಬೆಳೆಗಾರರ ವಿವಿಧ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸರ್ಕಾರದ ವತಿಯಿಂದ ಮೇಲಿನಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ.

No. HORTI/78/HGM/2023

(ಮುನಿರತ್ನ)
ತೋಟಗಾರಿಕೆ ಮತ್ತು ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು